# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2024 ಫ್ರಾಸಾ-05
ಚಾಸಾ-05

ದಿನಾಂಕಃ 16-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಅನಿಲ್ ಕುಮಾರ್ |
| **ತಂದೆಯ / ಗಂಡನ ಹೆಸರು** | ಹನುಮಂತಪ್ಪ |
| **ವಯಸ್ಸು** | 40 |
| **ಉದ್ಯೋಗ** | ಪೈಂಟಿಂಗ್ |
| **ವಾಸಸ್ಥಳ** | ದೊಮ್ಮತಮರಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-1 ಮತ್ತು 2 ರವರು ನನಗೆ ಪರಿಚಯ ಇರುತ್ತಾರೆ. ನನಗೆ ಆರೋಪಿ ಪರಿಚಯ ಇರುತ್ತದೆ, ಅವನು ನಮ್ಮ ಊರಿನವನೇ ಇರುತ್ತಾನೆ. ಆರೋಪಿ ಗಿರೀಶ್ ಬಾಬು ರವರ ಮೇಲೆ ಮೊದಲು ಒಂದು ಕೊಲೆ ಪ್ರಕರಣ ದಾಖಲಾಗಿತ್ತು. ಆರೋಪಿ ಗಿರೀಶ್ ಬಾಬುರವರಿಗೆ ರಮೇಶ್ ರವರು ಸಪೋರ್ಟ್ ಮಾಡಿಲ್ಲ ಎಂದು ರಮೇಶನ ಮೇಲೆ ದ್ವೇಷ ಸಾದಿಸುತ್ತಿದ್ದ. ದಿ. 30.06.2023 ರಂದು ಬೆಳಿಗ್ಗೆ 8.30 ಗಂಟೆಗೆ ಸಮಯದಲ್ಲಿ ದೊಮ್ಮತಮರಿ ಗ್ರಾಮದ ಆಶ್ವಿನಿ ಚಿಕನ್ ಸೆಂಟರ್ ಬಳಿ ನಾನು ಮತ್ತು ಚಾಸಾ-3 ಮತ್ತು 4 ರವರು ಇದ್ದಾಗ ರಮೇಶ್ ರವರು ಊಟ ತೆಗೆದುಕೊಂಡು ಹೊಲದ ಕಡೆ ಹೋಗುತ್ತಿದ್ದನು, ಆಗ ಆರೋಪಿ ಗಿರೀಶ್ ಕಬ್ಬಿಣದ ಪೈಪನ್ನು ತೆಗೆದುಕೊಂಡು ಬಂದು ಏಕಾಏಕಿ ರಮೇಶನ ತಲೆಗೆ ಹೊಡೆದ ಇದರಿಂದ ರಮೇಶನ ತಲೆಗೆ ಗಾಯವಾಗಿರುತ್ತದೆ ಇದರಿಂದ ಅವನು ನೆಲದ ಮೇಲೆ ಕುಸಿದು ಬಿದ್ದನು, ಆರೋಪಿ ಹೊರಟು ಹೋದನು, ಆಗ ರಮೇಶನ ತಮ್ಮನಿಗೆ ಪೋನ್ ಮಾಡಿ ತಿಳಿಸಿರುತ್ತೇವೆ. ನಾವುಗಳು ರಮೇಶನಿಗೆ ನೀರು ಕುಡಿಸಿ ಪಾವಗಡ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ.

ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ದಿ.02.07.2023 ರಂದು ಪೊಲೀಸರು ಸ್ಥಳ ಪಂಚನಾಮೆಗೆ ಬಂದಾಗ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಆ ದಿನ ಪೊಲೀಸರು ಮಧ್ಯಾಹ್ನ 2-30 ರಿಂದ 3-00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ, ಆ ಸಮಯದಲ್ಲಿ ಪೊಲೀಸರಿಗೆ ಜಾಗವನ್ನು ನಾನು ,ಗೋವಿಂದಪ್ಪ, ರಾಜೇಶ್ ಮತ್ತು ಬಾಬು ತೋರಿಸಿರುತ್ತೇವೆ. ಘಟನೆಯಾದ ದಿನ ಆರೋಪಿ ಮತ್ತು ರಮೇಶ ಧರಿಸಿದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-4 ಮತ್ತು 5 ಆ ದಿನ ಆರೋಪಿ ಧರಿಸಿರುವ ಬಟ್ಟೆಗಳಾಗಿರುತ್ತವೆ, ಮು.ಮಾ-2 ಮತ್ತು 3 ಬಟ್ಟೆಗಳು ರಮೇಶನದು ಆಗಿರುತ್ತದೆ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಆರೋಪಿ ಗೈರು ಹಾಜರಿದ್ದು , ಆತನ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯಲ್ಲಿ ಬರೆದಿರುತ್ತಾರೆ.**

**ಪಾಟೀಸವಾಲು:- ಶ್ರೀ. ಪಿ.ಸಿ.ಕೆ.ಆರ್. ವಕೀಲರು ಗೈರು ಹಾಜರಿದ್ದು ಶ್ರೀ ಡಿ.ಸಿ.ಎಸ್. ವಕೀಲರು ಸಮಯ ಕೋರಿದ್ದು ಯಾವುದೇ ಸಕಾರಣ ಇರದೇ ಇದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**